ಉತ್ತರ ಕನ್ನಡ ಜಿಲ್ಲೆಯಲ್ಲಿ ತಾಲ್ಲೂಕುವಾರು ಗೇರು ಸಸಿಗಳನ್ನು ಈ ಕೆಳಕಂಡಂತೆ ಹಂಚಿದೆ.

1)	ಶಿರಸಿ	12,500
2)	ಕುಮಟ	9,600
3)	ಹೊನ್ನಾವರ	8,000
4)	ಬಟ್ಕಳ	5,400
5)	ಸಿದ್ದಾಪುರ	12,000
6)	ಕಾರವಾರ	8,000
7)	ಹಳಿಯಾಳ	3,000
8)	ಅಂಕೋಲ	9,600
9)	ಜೋಯಿಡಾ	3,000
10)	ಮುಂಡಗೋಡು	31,000
11)	ಯಲ್ಲಾಪುರ	7,800

ಇ) ಹೌದು.

ಈ) ಮೇಲ್ಕಂಡ (ಇ) ಪ್ರಶ್ನೆಗೆ ಉತ್ತರಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :- ಉತ್ತರ ಕರ್ನಾಟಕದಲ್ಲಿ ಇ.ಎಸ್.ಐ. ನಿಗಮದ ಉಪ ವಲಯದ ಕಛೇರಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2291 (2948)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣಾ) :- ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉತ್ತರ ಕರ್ನಾಟಕದ ಉದ್ಯೋಗಿಗಳ ಅನುಕೂಲಕ್ಕಾಗಿ ಇ. ಎಸ್. ಐ. ನಿಗಮದ ಉಪವಲಯ ಕಛೇರಿಯನ್ನು ಹುಬ್ಬಳ್ಳಿಯಲ್ಲಿ ತೆರೆಯ ಬೇಕೆಂಬುದರ ವಿಷಯ ಸರ್ಕಾರದವರ ಮುಂದಿದೆಯೇ;

ಆ) ಹಾಗಿದ್ದಲ್ಲಿ ಈ ಉಪವಲಯ ಕಛೇರಿಯನ್ನು ಹುಬ್ಬಳ್ಳಿಯಲ್ಲಿ ತೆರೆಯುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಲು ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :-

ಅ) ಹೌದು

ಆ) ಕಾರ್ಮಿಕ ರಾಜ್ಯ ವಿಮಾ ನಿಗಮ ನವದೆಹಲಿ ಇಲ್ಲಿಗೆ ಶಿಫಾರಸ್ಸು ಮಾಡಲಾಗಿದೆ.

ವಿಷಯ :- ರಾಜ್ಯದಲ್ಲಿ ಮಿನಿ ವಿಧಾನ ಸೌಧಗಳ ನಿರ್ಮಾಣ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2293 (3014)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಇಲ್ಲಿಯವರೆಗೆ ಎಷ್ಟು ತಾಲ್ಲೂಕುಗಳಲ್ಲಿ ಮಿನಿ ವಿಧಾನ ಸೌಧಗಳನ್ನು ಕಟ್ಟಿಸಲಾಗಿದೆ?

ಆ) ಎಷ್ಟು ತಾಲ್ಲೂಕುಗಳಲ್ಲಿ ಕಟ್ಟುವ ವಿಚಾರ ಇದೆ, ಮತ್ತು ಎಷ್ಟು ಅವಧಿಯಲ್ಲಿ ಕಟ್ಟಲಾಗುವುದು?

ಇ) ಹುಬ್ಬಳ್ಳಿ ತಾಲ್ಲೂಕಿನಲ್ಲಿ ಮಿನಿ ವಿಧಾನ ಸೌಧ ಕಟ್ಟುವ ವಿಚಾರ ಸರ್ಕಾರಕ್ಕೆ ಇದೆಯೇ, ಇದ್ದರೆ ಯಾವಾಗ ಕಟ್ಟಲಾಗುವುದು?

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) :-

ಅ) ಇದುವರೆವಿಗೂ 52 ಸ್ಥಳಗಳಲ್ಲಿ ಮಿನಿ ವಿಧಾನ ಸೌಧ ನಿರ್ಮಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಅವುಗಳ ಪೈಕಿ 6 ಪೂರ್ಣಗೊಂಡಿವೆ.

ಆ) ಇದುವರೆಗೂ ಮಂಜೂರಾತಿ ನೀಡಿರುವ ಎಲ್ಲಾ 52 ಮಿನಿ ವಿಧಾನ ಸೌಧ ಕಟ್ಟಡಗಳು ಪೂರ್ಣಗೊಂಡ ನಂತರ ಉಳಿದ ಸ್ಥಳಗಳಲ್ಲಿ ಕಟ್ಟುವ ಬಗ್ಗೆ ಪರಿಶೀಲಿಸಲಾಗುವುದು.

ಇ) (ಅ) ಪ್ರಶ್ನೆಗೆ ಉತ್ತರಿಸಿರುವುದರಿಂದ (ಇ) ಪ್ರಶ್ನೆಗೆ ಉತ್ತರಿಸುವುದು ಉದ್ಭವಿಸುವುದಿಲ್ಲ.

ವಿಷಯ :- ಹುಬ್ಬಳ್ಳಿ ನಗರದ ಕಿತ್ತೂರು ಚೆನ್ನಮ್ಮ ವರ್ತುಲದಲ್ಲಿ ಹೆಚ್ಚಿನ ಜನಸಂಚಾರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2294 (2949)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ನಗರದ ಕಿತ್ತೂರ ಚೆನ್ನಮ್ಮ ವರ್ತುಳದಲ್ಲಿ ಸಂಚಾರ ಮತ್ತು ಜನಸಂದಣಿ ಸಮಸ್ಯೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅದನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?